ಆ) ಶೈಕ್ಷಣಿಕ ಪದ್ಧತಿಯಲ್ಲಿನ ನ್ಯೂನತೆಯನ್ನು ಸರಿಪಡಿಸುವುದಕ್ಕಾಗಿ ತ್ರೈಮಾಸಿಕ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಹಾಗೂ ಈ ತ್ರೈಮಾಸಿಕ ಬೋಧನಾ ಪದ್ಧತಿಯಿಂದ ಶಿಕ್ಷಣ ಗುಣಮಟ್ಟವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ.

ತ್ರೈಮಾಸಿಕ ಪದ್ಧತಿಯಲ್ಲಿ ಮೌಖಿಕ ಪರೀಕ್ಷೆ, ಪ್ರಾಜೆಕ್ಟ್ ವರ್ಕ್, ಮೌಲ್ಯಗಳು, ಜೀವನ ಕೌಶಲಗಳು, ಜೀವನ ವಿಜ್ಞಾನ ಇವುಗಳಿಗೂ ಸಹ ಅವಕಾಶವನ್ನು ನೀಡಲಾಗಿದೆ. ಈ ಮೌಲ್ಯಮಾಪನದ ನಂತರ ಕಲಿಕೆಯಲ್ಲಿ ನ್ಯೂನತೆಯನ್ನು ಗುರುತಿಸಿ ಪರಿಹಾರ ಬೋಧನೆಯನ್ನು ಮಾಡಲು ಇದರಲ್ಲಿ ಅವಕಾಶವಿದೆ. ಇದಲ್ಲದೆ ವರ್ಷದ ಪ್ರಾರಂಭದಲ್ಲಿ ಜೂನ್ ತಿಂಗಳಲ್ಲಿ ಪೂರ್ವ ಪರೀಕ್ಷೆ ಪರಿಹಾರ ಭೋದನೆಯನ್ನು ಸಹ ಹಮ್ಮಿಕೊಳ್ಳಲಾಗಿದೆ. ಇದಲ್ಲದೆ ಪ್ರತಿ ಘಟಕದ ಬೋಧನೆಯ ನಂತರ ಘಟಕ ಮೌಲ್ಯಮಾಪನ ಮಾಡಲೂ ಸಹ ಕ್ರಮ ಕೈಗೊಳ್ಳಲಾಗಿದೆ. ಈ ಪದ್ಧತಿಯಿಂದ ಶಿಕ್ಷಣದ ಗುಣಮಟ್ಟ ಗಣನೀಯವಾಗಿ ಸುಧಾರಿಸಿದೆ ಎಂದು ಭಾವಿಸಲಾಗಿದೆ. ಈ ಬಗ್ಗೆ ಪಿಪಿಯು ಘಟಕದಿಂದ ಸಮೀಕ್ಷೆ ನಡೆಸಲಾಗಿದ್ದು, ಈ ಸಮೀಕ್ಷೆಯಲ್ಲಿ ಬಂದ ಹಿಮ್ಮಾಹಿತಿ ಮೇರೆಗೆ 2005–06ನೇ ಸಾಲಿಗೆ ಹಲವಾರು ಮಾರ್ಪಾಡುಗಳನ್ನು ಮಾಡಲಾಗಿದೆ.

ಇ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಯಾವುದೇ ಪುರಸ್ಕಾರ ನೀಡುತ್ತಿಲ್ಲ. ಆದರೆ ಅಭಿನಂದನಾ ಪತ್ರ ನೀಡಲಾಗುತ್ತಿದೆ.

ಈ) ಈ ವಿಷಯ ಸರಕಾರದ ಗಮನಕ್ಕೆ ಬಂದಿದ್ದು ಇಲ್ಲಿನ ಉಪ ನಿರ್ದೇಶಕರ ಹುದ್ದೆಯನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

5060 (5970) ಶ್ರೀ ರಘುಪತಿ ಭಟ್ ಕೆ. (ಉಡುಪಿ) :– ಮಾನ್ಯ ವಸತಿ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ಎರಡು ವರ್ಷದಿಂದ ರಾಜ್ಯದಲ್ಲಿ ಹಂಚಿಕೆಯಾದ ಮನೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಪಟ್ಟಿ ನೀಡುವುದು)

ಆ) ಆಶ್ರಯ ಅಂಬೇಡ್ಕರ್ ಇಂದಿರಾ ಆವಾಸ್ ಯೋಜನೆಗಳನ್ನು ಗ್ರಾಮಪಂಚಾಯತ್‌ಗಳಲ್ಲಿ ಹೇಗೆ ಆಯ್ಕೆ ಮಾಡಲಾಗುವುದು; ನಗರ ಪ್ರದೇಶಗಳಲ್ಲಿ ಹೇಗೆ ಆಯ್ಕೆ ಮಾಡಲಾಗುವುದು;

ಇ) ಇಂದಿರಾ ಆವಾಜ್ ಅಂಬೇಡ್ಕರ್ ಮತ್ತು ಆಶ್ರಯ ಯೋಜನೆಗಳ ಫಲಾನುಭವಿಗಳಿಗೆ ಉಚಿತವಾಗಿ ನೀಡುವುದರಿಂದ ಆ ಯೋಜನೆಗೂ ಆರ್.ಟಿ.ಸಿ. ಹಕ್ಕು ಪತ್ರಬೇಕು ಎಂದು ಕೇಳುವುದು ಸರಿಯೆ

ಈ) ಈ ವರ್ಷದಲ್ಲಿ ಎಷ್ಟು ಮನೆಗಳನ್ನು ಕೊಡುವ ಯೋಜನೆಯನ್ನು ಸರ್ಕಾರ ಹಮ್ಮಿಕೊಂಡಿದೆ;

ಉ) ರಾಜ್ಯದಲ್ಲಿ ನಿವೇಶನ ರಹಿತರಿಗೆ ನಿವೇಶನ ಹಂಚಲು ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ?

ಶ್ರೀ ಅಂಜನಮೂರ್ತಿ, ವಸತಿ ಸಚಿವರು :

ಅ) ಕಳೆದ ಎರಡು ವರ್ಷಗಳಲ್ಲಿ ಅಂದರೆ 2003–2004 ಮತ್ತು 2004–2005ರಲ್ಲಿ ಕಹೊಸದಾಗಿ ಹಂಚಿಕೆಯಾದ ಮನೆಗಳ ಸಂಖ್ಯೆ ಈ ಕೆಳಗಿನಂತಿದೆ. (ಜಿಲ್ಲಾವಾರು ಪಟ್ಟಿ ಅನುಬಂಧ 'ಅ' ಮತ್ತು 'ಆ'ದಲ್ಲಿ)ಲಗತ್ತಿಸಿದೆ.

ವರ್ಷ	ಯೋಜನೆ	ಹೊಸದಾಗಿ ಹಂಚಿಕೆಯಾದ ಮನೆಗಳ ಸಂಖ್ಯೆ (ಗುರಿ)
2003–2004	ಗ್ರಾಮೀಣ ಆಶ್ರಯ	131073
	ಗ್ರಾಮೀಣ ಆಶ್ರಯ (ತಾಂಡ)	15131
	ನವಗ್ರಾಮ ಆಶ್ರಯ ಯೋಜನೆ	33666
	ಗ್ರಾಮೀಣ ಅಂಬೇಡ್ಕರ್	15874
	ನಗರ ಆಶ್ರಯ	26293
	ಇಂದಿರಾ ಆವಾಸ್	56565
	ಪ್ರಧಾನ ಮಂತ್ರಿ ಗ್ರಾಮೀಣ ಆವಾಸ್	8100
ಒಟ್ಟು		286702
2004–2005	ಗ್ರಾಮೀಣ ಆಶ್ರಯ	
	ಗ್ರಾಮೀಣ ಅಂಬೇಡ್ಕರ್	ಗುರಿ
	ಗ್ರಾಮೀಣ ಆಶ್ರಯ (ತಾಂಡ)	ನೀಡಿರುವುದಿಲ್ಲ.
	ನವಗ್ರಾಮ ಆಶ್ರಯ ಯೋಜನೆ	
	ನಗರ ಆಶ್ರಯ	
	ಇಂದಿರಾ ಆವಾಸ್	59529
	ಪ್ರಧಾನ ಮಂತ್ರಿ ಗ್ರಾಮೀಣ ಆವಾಸ್	8100
ಒಟ್ಟು		67629

ಆ) ಗ್ರಾಮೀಣ ಪ್ರದೇಶ :

' ನಿವೇಶನ ರಹಿತರ' ಪಟ್ಟಿ ಹಾಗೂ 'ಸ್ವಂತ ನಿವೇಶನವನ್ನು ಹೊಂದಿದ್ದು ಮನೆ ಇಲ್ಲದವರ ಪಟ್ಟಿ' ಯನ್ನು ಸಮೀಕ್ಷೆ ಮೂಲಕ ಗ್ರಾಮಪಂಚಾಯಿತಿವಾರು ತಯಾರಿಸಲಾಗಿದ್ದು, ಆ ಪಟ್ಟಿಯನ್ನು ಇನ್ನು ಸೇರ್ಪಡೆ ಆಗದೇ ಇರುವ ನೈಜ ಮತ್ತು ಅರ್ಹ ಅಭ್ಯರ್ಥಿಗಳನ್ನು ಸೇರಿಸಿ ಮತ್ತು ಅನರ್ಹ ಅಭ್ಯರ್ಥಿಗಳಿದ್ದರೆ ಅಂತಹವರನ್ನು ಪಟ್ಟಿಯಿಂದ ತೆಗೆದು ಹಾಕಿ ಆಗಿಂದಾಗ್ಗೆ ಪರಿಷ್ಕೃತ ಪಟ್ಟಿಯನ್ನು ಗ್ರಾಮ ಪಂಚಾಯತಿಗಳು ಗ್ರಾಮ ಸಭೆಗಳ ಮೂಲಕ ತಯಾರಿಸಬೇಕು. ಅದರ ಆಧಾರದ ಮೇಲೆ ವಸತಿಗಾಗಿ ಅರ್ಜಿ ಸಲ್ಲಿಸಿರುವ ಫಲಾನುಭವಿಗಳನ್ನು ಪ್ರತಿ ಗ್ರಾಮ ಪಂಚಾಯತಿಗೆ ನೀಡಲಾಗುವ ಗುರಿಗೆ ಅನುಗುಣವಾಗಿ ಗುಡಿಸಲು ಮನೆಗಳಿಗೆ ಮೊದಲ ಆದ್ಯತೆ ನೀಡಿ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಬೇಕು.

ನಗರ ಪ್ರದೇಶ :

'ನಿವೇಶನ ರಹಿತರ ಪಟ್ಟಿ' ಹಾಗೂ ಸ್ವಂತ ನಿವೇಶನವನ್ನು ಹೊಂದಿದ್ದು ಮನೆ ಇಲ್ಲದವರ ಪಟ್ಟಿಯನ್ನು ಸಮೀಕ್ಷೆ ಮೂಲಕ ನಗರಸಭೆ/ಪುರಸಭೆ/ಪಟ್ಟಣ ಪಂಚಾಯತಿವಾರು ತಯಾರಿಸಲಾಗಿದ್ದು, ಆ ಪಟ್ಟಿಯಲ್ಲಿ ಇನ್ನು ಸೇರ್ಪಡೆ ಆಗದೇ ಇರುವ ನೈಜ ಮತ್ತು ಅರ್ಹ ಅಭ್ಯರ್ಥಿಗಳನ್ನು ಸೇರಿಸಿ ಮತ್ತು ಅನರ್ಹ ಅಭ್ಯರ್ಥಿಗಳಿದ್ದರೆ ಅಂತಹವರನ್ನು ಪಟ್ಟಿಯಿಂದ ತೆಗೆದು ಹಾಕಿ ಆಗಿಂದಾಗ್ಗೆ ಪರಿಷ್ಕೃತ ಪಟ್ಟಿಯನ್ನು ಸದರಿ ಸ್ಥಳೀಯ ಸಂಸ್ಥೆಗಳು ತಯಾರಿಸಬೇಕು. ಅದರ

ಆಧಾರದ ಮೇಲೆ ವಸತಿಗಾಗಿ ಅರ್ಜಿ ಸಲ್ಲಿಸಿರುವ ಫಲಾನುಭವಿಗಳನ್ನು ಪ್ರತಿ ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗುವ ಗುರಿಗೆ ಅನುಗುಣವಾಗಿ ಗುಡಿಸಲು ಮನೆಗಳಿಗೆ ಮೊದಲ ಆದ್ಯತೆ ನೀಡಿ ಸ್ಥಳೀಯ ಸಂಸ್ಥೆಗಳ ಸಭೆಯಲ್ಲಿ ಆಯ್ಕೆ ಮಾಡಬೇಕು.

ಇ) ಇಂದಿರಾ ಆವಾಜ್ ಅಂಬೇಡ್ಕರ್ ಯೋಜನೆಗಳಡಿಯಲ್ಲಿ ನಿಗದಿಮಾಡಲಾದ ಹಣ ಸಂಪೂರ್ಣವಾಗಿ ಸಹಾಯಧನವಾಗಿ ಬಿಡುಗಡೆ ಮಾಡಲಾಗುತ್ತಿದ್ದು, ಸಾಲದ ಅಂಶ ಇರುವುದಿಲ್ಲ.

ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಕೊಡ ಮಾಡುವ 20000 ರೂ.ಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಪೂರ್ಣ ಸಹಾಯಧನವಾಗಿದ್ದು ಇತರೆ ವರ್ಗದವರಿಗೆ 10000 ರೂಗಳು ಸಹಾಯಧನ ಮತ್ತು 10000 ರೂಗಳು ಸಾಲವಾಗಿ ನೀಡಲಾಗುತ್ತದೆ.

ನಗರ ಆಶ್ರಯ ಯೋಜನೆಯಡಿಯಲ್ಲಿ ಸಹಾಯಧನದ ಅಂಶ ಇರುವುದಿಲ್ಲ. ಎಲ್ಲಾ 25000 ರೂ.ಗಳು ಸಾಲವಾಗಿ ನೀಡಲಾಗುತ್ತದೆ.

ಸಾಲದ ಅಂಶ ಇಲ್ಲದಿರುವ ಮನೆಗಳಿಗೂ ಕೂಡ ಆರ್.ಟಿ.ಸಿ ಇರುವುದು ಅವಶ್ಯಕ ಅಂದರೆ ಫಲಾನುಭವಿಗಳ ಹೆಸರಿನಲ್ಲಿ ನಿವೇಶನ ಇರುವುದು ಅತ್ಯವಶ್ಯ. ಫಲಾನುಭವಿಗಳ ಹೆಸರಿನಲ್ಲಿ ನಿವೇಶನ ಇಲ್ಲದೆ ಮನೆ ಕಟ್ಟುವುದು ಕಾನೂನು ಬಾಹಿರವಾಗುತ್ತದೆ. ಆದ್ದರಿಂದ ಆರ್.ಟಿ.ಸಿ. ಕಡ್ಡಾಯವಾಗಿದೆ. ಈ ಬಗ್ಗೆ ಸರ್ಕಾರದ ಸುತ್ತೋಲೆ ಸಂಖ್ಯೆ : ವ ಇ 74 ಹೆಚ್ ಎ ವೈ 2004, ದಿನಾಂಕ : 20.11.2004 ರಲ್ಲಿ ಆಶ್ರಯ, ಇಂದಿರಾ ಆವಾಸ್ ಯೋಜನೆ,. ಐಟಿಡಿಪಿ ಯನ್ನು ಒಳಗೊಂಡ ಅಂಬೇಡ್ಕರ್ ಯೋಜನೆಗಳಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ನಿವೇಶನ ಹೊಂದಿರುವ ವಸತಿ ರಹಿತರ ಪಟ್ಟಿಯಿಂದ ಪರಿಗಣಿಸಬೇಕು ಎಂದು ನಿರ್ದೇಶಿಸಲಾಗಿದೆ.

ಈ) ಈ ವರ್ಷ ಅಂದರೆ 2005–2006 ರಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ 40 ಮನೆ ಹಂಚುವ ಉದ್ದೇಶ ಇದ್ದು, ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 2005–2006 ರಲ್ಲಿ ಒಟ್ಟು 52848 ಮನೆಗಳ ಗುರಿಯನ್ನು ಹೊಂದಲಾಗಿದೆ. ನಗರ ಪ್ರದೇಶಗಳಿಗೆ ಒಟ್ಟಾರೆ ನಗರ ಆಶ್ರಯ ಯೋಜನೆಯಡಿ 30000 ಮನೆಗಳ ಗುರಿಯನ್ನು ನೀಡುವ ಉದ್ದೇಶವಿದ್ದು, ಅದು ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ರಾಜ್ಯದಲ್ಲಿ ನಿವೇಶನ ರಹಿತರಿಗೆ ಈ ಕೆಳಗಿನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ.

1. ಗ್ರಾಮೀಣ ನಿವೇಶನ ಯೋಜನೆ
2. ನಗರ ನಿವೇಶನ ಯೋಜನೆ

5061 (5971) ಶ್ರೀ ರಘುಪತಿ ಭಟ್.ಕೆ. (ಉಡುಪಿ) :– ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖಾ ರಾಜ್ಯ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಳೆದ ಎರಡು ವರ್ಷದಿಂದ ಸ್ವಜಲಧಾರ ಯೋಜನೆಯಿಂದ ಎಷ್ಟು ಯೋಜನೆಗಳು ಮಂಜೂರಾಗಿದೆ (ಜಿಲ್ಲಾವಾರು ಪಟ್ಟಿ ನೀಡುವುದು)

ಆ) ರಾಜ್ಯದಲ್ಲಿ ಗ್ರಾಮ ಪಂಚಾಯತ್‌ನವರು ನಾಗರೀಕರಿಂದ ಶೇ.10/– ಹಣವನ್ನು ಪಡೆದು ಜಿಲ್ಲಾ ಪಂಚಾಯತ್‌ಗೆ ಪ್ರಸ್ತಾವನೆ ಸಲ್ಲಿಸಿದ ಎಷ್ಟು ಯೋಜನೆಗಳಿಗೆ ಹಣ ಬಿಡುಗಡೆ ಮಾಡಲು ಬಾಕಿ ಇದೆ: